# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 23-11-2015ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | | ಹಾಜರಿದ್ದ ಅಧಿಕಾರಿಗಳು |
|---|---|---|
| ಶ್ರೀಯುತರುಗಳಾದ : | | |
| ಎಮ್. ಶಿವರಾಜು | – ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ, |
| ವಿ.ವಿ.ಪಾರ್ತಿಬರಾಜನ್ | – ಸದಸ್ಯರು | ವಿಶೇಷ ಆಯುಕ್ತರು (ಹಣಕಾಸು), (ಕಲ್ಯಾಣ), |
| ಆರ್.ಪದ್ಮಾವತಿ ಅಮರ್‌ನಾಥ್ | – ಸದಸ್ಯರು | ಪ್ರಧಾನ ಅಭಿಯಂತರರು, |
| ಲಲಿತ ತಿಮ್ಮನಂಜಯ್ಯ.ಕೆ.ಎಲ್.ಆರ್ | – ಸದಸ್ಯರು | ಮುಖ್ಯ ಆರ್ಥಿಕ ಅಧಿಕಾರಿ, |
| ನೇತ್ರಾ ನಾರಾಯಣ್ | – ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ, |
| ಉಮೇಸಲ್ಮ | – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಸಾರಿಗೆ), |
| ಎ. ಕೋದಂಡರೆಡ್ಡಿ | – ಸದಸ್ಯರು | ಅಧೀಕ್ಷಕ ಅಭಿಯಂತರರು (ಎಸ್.ಡಬ್ಲ್ಯೂ.ಎಂ), |
| ಕೆ. ಪೂರ್ಣಿಮ | – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪಶ್ಚಿಮ), |
| ಕುಸುಮ. ಹೆಚ್ | – ಸದಸ್ಯರು | ಉಪ ಕಾನೂನು ಅಧಿಕಾರಿ, |
| ಕೆ.ವಿ. ರಾಜೇಂದ್ರಕುಮಾರ್ | – ಸದಸ್ಯರು | ಕಲ್ಯಾಣಾಧಿಕಾರಿ (ಕೇಂದ್ರ), |
| ಅರುಣ ರವಿ | – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು. |

***(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)***

### *01]. ವಿಷಯದ ಸಂಖ್ಯೆಃ ತೆಆಸ್ಥಾಸ/02/2014-15*

ಆಯುಕ್ತರ ದಿನಾಂಕ: 16.09.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಜಂಟಿ ಆಯುಕ್ತರು (ಆರೋಗ್ಯ ಮತ್ತು ಘನತ್ಯಾಜ್ಯ ವಸ್ತುಗಳ ನಿರ್ವಹಣೆ) ರವರು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ 2015-16ನೇ ಸಾಲಿನ ಮೊದಲನೆ ಕಂತಿನ ಮುಕ್ತ ನಿಧಿ ಅನುದಾನದಲ್ಲಿ ಪಾಲಿಕೆಯ ಘನತ್ಯಾಜ್ಯ ಸಂಸ್ಕರಣಾ ಘಟಕಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾ ಯೋಜನೆ ತಯಾರಿಸಿ 59 ಕಾಮಗಾರಿಗಳಿಗೆ ಒಟ್ಟು ರೂ.44.26 ಕೋಟಿಗಳಿಗೆ ಕಾಮಗಾರಿ ಸಂಖ್ಯೆಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಂಡಿಕೆ 14 ರಲ್ಲಿ ವಿಶೇಷ ಆಯುಕ್ತರು ಘನತ್ಯಾಜ್ಯ ನಿರ್ವಹಣೆ ರವರು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ ನಅಇ/219/ಎಸ್.ಎಫ್.ಸಿ/2015 ಬೆಂಗಳೂರು ದಿನಾಂಕ 29-4-2015 ರಲ್ಲಿ 2015-16ನೇ ಸಾಲಿನ ಮೊದಲನೆ ಕಂತಿನ ಎಸ್.ಎಫ್.ಸಿ. ಮುಕ್ತ ನಿಧಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರೂ.5443.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಆದೇಶದಲ್ಲಿ ಪಾಲಿಕೆಗೆ ಬಿಡುಗಡೆ ಮಾಡುವ ಮೊತ್ತವನ್ನು ಘನತ್ಯಾಜ್ಯ ವಸ್ತು ನಿರ್ವಹಣೆ ಕಾಮಗಾರಿಗಳಿಗೆ ಬಳಸತಕ್ಕದ್ದು ಎಂದು ಆದೇಶಿಸಲಾಗಿದೆ.

ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರು ದಿನಾಂಕ 10-9-2015ರ ನಡವಳಿ ವಿಷಯ ಸಂಖ್ಯೆ 200/2015-16 ರಂತೆ ಒಟ್ಟು 59 ಕಾಮಗಾರಿಗಳಿಗೆ ಒಟ್ಟು ರೂ.44.26 ಕೋಟಿಗಳಿಗೆ ಅನುಮೋದನೆ ನೀಡಿ ಸರ್ಕಾರದ ಎಸ್.ಎಫ್.ಸಿ. ಮುಕ್ತ ನಿಧಿ ಅನುದಾನದಲ್ಲಿ ಭರಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ.

2015-16ನೇ ಸಾಲಿನ ಆಯವ್ಯಯದಲ್ಲಿ ಘನತ್ಯಾಜ್ಯ ವಿಭಾಗದಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಮೀಸಲಿರಿಸಿರುವುದಿಲ್ಲ. ಮುಕ್ತ ನಿಧಿಯ ಅನುದಾನದಲ್ಲಿ ಸದರಿ ಕಾಮಗಾರಿಗಳ ವೆಚ್ಚಗಳನ್ನು ಭರಿಸಲು ಆಯವ್ಯಯದಲ್ಲಿ ವೆಚ್ಚದ ಭಾಗದಲ್ಲಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಆದ್ದರಿಂದ 14ನೇ ಹಣಕಾಸು ಆಯೋಗ ಅನುದಾನದ ಲೆಕ್ಕ ಶೀರ್ಷಿಕೆ ಪಿ. 2200ನ್ನು ಈಗಾಗಲೇ ಘನತ್ಯಾಜ್ಯ ನಿರ್ವಹಣೆ ಮತ್ತು ಅಭಿವೃದ್ಧಿಗೆ

ಕಾಮಗಾರಿಗಳಿಗೆ ಬಳಸಲಾಗುತ್ತಿರುವುದರಿಂದ ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 59 ಕಾಮಗಾರಿಗಳಿಗೆ ಒಟ್ಟು ರೂ.3987.44 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡಲು ಪರಿಗಣಿಸಬಹುದಾಗಿದೆ. ಪ್ರಸ್ತುತ 2015-16ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ.2200 ರಲ್ಲಿ ರೂ.1000.00 ಲಕ್ಷಗಳನ್ನು ಮೀಸಲಿರಿಸಿದ್ದು, ಇದುವರೆವಿಗೆ ರೂ.991.70 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡಲಾಗಿದ್ದು, ಬಾಕಿ ರೂ.8.30 ಲಕ್ಷಗಳ ಅನುದಾನ ಲಭ್ಯವಿರುತ್ತದೆ. ಆದ್ದರಿಂದ, ಸದರಿ ಕಾಮಗಾರಿಗಳು ಘನತ್ಯಾಜ್ಯ ನಿರ್ವಹಣೆ ಅಭಿವೃದ್ಧಿ ಕಾಮಗಾರಿಗಳಾಗಿದ್ದು, ಘನತ್ಯಾಜ್ಯ ಸಂಸ್ಕರಣಾ ಘಟಕಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಪ್ರಸ್ತಾಪಿತ ಒಟ್ಟು 59 ಕಾಮಗಾರಿಗಳ ಮೊತ್ತ ರೂ.3987.44 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ ಹೆಚ್ಚುವರಿ ಅನುದಾನ ರೂ.3987.44 ಲಕ್ಷಗಳನ್ನು ಆಯವ್ಯಯ ಲೆಕ್ಕ ಶೀರ್ಷಿಕೆ ಪಿ.2200 ರಲ್ಲಿ ಅಳವಡಿಸಿಕೊಂಡು ಕಾಮಗಾರಿ ಸಂಖ್ಯೆ 310-16-000031 ರಿಂದ 310-16-000089 ರವರೆಗೆ ರೂ.3987.44 ಲಕ್ಷಗಳಿಗೆ ನೀಡಲಾಗಿದೆ. ಭರಿಸಲಾದ ವೆಚ್ಚವನ್ನು 2015-16ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗುವುದು.

ಮೇಲ್ಕಂಡಂತೆ ಹೆಚ್ಚುವರಿ ಅನುದಾನ ರೂ.3987.44 ಲಕ್ಷಗಳನ್ನು ಅಳವಡಿಸಿಕೊಂಡು ನೀಡಲಾದ ಕಾಮಗಾರಿ ಸಂಖ್ಯೆಗಳಿಗೆ ಮತ್ತು ಅನುದಾನಗಳಿಗೆ ಘಟನೋತ್ತರ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 16.09.2015ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *02]. ವಿಷಯದ ಸಂಖ್ಯೆ: ತೆಆಸ್ಥಾಸ/07/2015-16*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 19.10.2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಕಾರ್ಯಪಾಲಕ ಅಭಿಯಂತರರು, ಸಂಚಾರಿ ಕಾಮಗಾರಿ ವಿಭಾಗದಲ್ಲಿ 2008-09ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ.537 ರಲ್ಲಿ Widening and improvements to Kasturba Road from Siddalingaiah Circle to Queen's statue in Bangalore ಕಾಮಗಾರಿಗೆ ಕಾಮಗಾರಿ ಸಂಕೇತ 000-09-N-P-E-R-WD-013 ನ್ನು ರೂ.171.50 ಲಕ್ಷಗಳಿಗೆ ಪಡೆಯಲಾಗಿರುತ್ತದೆ ಹಾಗೂ ಎಫ್.ಬಿ.ಎ.ಎಸ್. ಗಣಕ ಕೇಂದ್ರದಲ್ಲಿ ದಾಖಲಾಗಿರುತ್ತದೆ. [ಕಡತದ ಬಲಭಾಗದಲ್ಲಿರುವ ಪುಟ ಸಂಖ್ಯೆ 313ನ್ನು ಅವಗಾಹಿಸಬಹುದಾಗಿರುತ್ತದೆ] ಕಂಡಿಕೆ 257, 258, 259 ರಲ್ಲಿ ಮುಖ್ಯ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ರವರು ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಶ್ರೀ ವೆಂಕಟಸ್ವಾಮಿ ಗುತ್ತಿಗೆದಾರರು ರವರಿಗೆ ವಹಿಸಿದ್ದು, ಸದರಿಯವರು 2 ವರ್ಷಗಳ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ವಿಫಲರಾದ ಹಿನ್ನೆಲೆಯಲ್ಲಿ ಸದರಿಯವರ ಟೆಂಡರ್‌ನ್ನು Risk and Cost ಆಧಾರದ ಮೇಲೆ ರದ್ದುಗೊಳಿಸಲು ಹಾಗೂ ಉಳಿಕೆ ಕಾಮಗಾರಿಯ ನಿರ್ವಹಣೆಗೆ ಹೆಚ್ಚುವರಿ ಅಂಶಗಳನ್ನು ಒಳಗೊಂಡಂತೆ ಪರಿಷ್ಕೃತ ಅಂದಾಜು ಮೊತ್ತ ರೂ.265.00 ಲಕ್ಷಗಳಿಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ವಿಷಯ ಸಂಖ್ಯೆ 173/2011-12 ದಿನಾಂಕ 12-1-2012 ಹಾಗೂ ಪಾಲಿಕೆ ಕೌನ್ಸಿಲ್ ಸಭೆಯ ನಡವಳಿ ವಿಷಯ ಸಂಖ್ಯೆ 71(34)/2011-12 ದಿನಾಂಕ 3-3-2012 ರಲ್ಲಿ ಪರಿಷ್ಕೃತ ಅಂದಾಜು ಮೊತ್ತ ರೂ.265.00 ಲಕ್ಷಗಳಿಗೆ ಅನುಮೋದನೆ ನೀಡಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ಮೆ: ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ಪೂರ್ಣಗೊಳಿಸಲಾಗಿರುತ್ತದೆ ಎಂದು ಉಲ್ಲೇಖಿಸಿರುತ್ತಾರೆ.

ಕಡತದ ಕಂಡಿಕೆ 266 ರಲ್ಲಿ ಕಾಮಗಾರಿ ಸಂಕೇತವನ್ನು ನವೀಕರಿಸಲು ಕಾ.ಪಾ.ಅ. ಸಂಚಾರಿ ಕಾಮಗಾರಿ ವಿಭಾಗ ರವರು ಕೋರಿರುತ್ತಾರೆ. ಸದರಿ ಕಾಮಗಾರಿಗೆ ಕಾಮಗಾರಿ ಸಂಖ್ಯೆ ಮರುದೃಢೀಕರಣ ಪ್ರಮಾಣ ಪತ್ರ ನೀಡುವ ಸಂಬಂಧ, 2015-16ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 0537 ರಲ್ಲಿ ಮುಂದುವರೆದ ಕಾಮಗಾರಿಗಳ ಅಡಿಯಲ್ಲಿ ರೂ.2.65 ಕೋಟಿಗಳನ್ನು ಮೀಸಲಿರಿಸಲಾಗಿರುತ್ತದೆ. ಸದರಿ ಲೆಕ್ಕ ಶೀರ್ಷಿಕೆಗೆ ರೂ.65.00 ಲಕ್ಷಗಳನ್ನು ಹೆಚ್ಚಿಸಿಕೊಂಡು, ಪ್ರಸಕ್ತ ಸಾಲಿನಲ್ಲಿ ವೆಚ್ಚವನ್ನು ಭರಿಸಿದಲ್ಲಿ ಸದರಿ ವೆಚ್ಚವನ್ನು 2015-16ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ.

ಆದ್ದರಿಂದ, ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮುಂದುವರೆದ ಕಾಮಗಾರಿಗಳ ಅಡಿಯಲ್ಲಿ ಹೆಚ್ಚುವರಿ ಮೊತ್ತ ರೂ.65.00 ಲಕ್ಷಗಳನ್ನು ಒದಗಿಸಿಕೊಂಡು 2015–16ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ರೂ.265.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ಮರು ದೃಡೀಕರಣ ಪ್ರಮಾಣ ಪತ್ರವನ್ನು ನೀಡುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 19.10.2015ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *03]. ವಿಷಯದ ಸಂಖ್ಯೆ: ತೆಆಸ್ಥಾಸ/08/2015–16*

ಆಯುಕ್ತರ ದಿನಾಂಕ: 26–10–2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಡವಳಿ ಆದೇಶ ಸಂಖ್ಯೆ:ನಅಇ 71 ಸಮನ್ವಯ 2014 ದಿನಾಂಕ: 22/04/2015ರಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯದ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಕ್ಷೇತ್ರ ಇಲಾಖೆ / ಮಂಡಳಿ / ಪ್ರಾಧಿಕಾರಿಗಳಿಗೆ ಸಂಬಂಧಪಟ್ಟಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಲವು ಸಾವಿರಾರು ಪ್ರಕರಣಗಳು ಬಾಕಿ ಇರುತ್ತವೆ. ಸದರಿ ಪ್ರಕರಣಗಳ ಸಂಬಂಧ ಸರ್ಕಾರದ ಪರವಾಗಿ ಆಕ್ಷೇಪಣಾ ಹೇಳಿಕೆ / ಪ್ರತಿರಕ್ಷಣಾ ಹೇಳಿಕೆಗಳನ್ನು ಸಲ್ಲಿಸಲು ಸಚಿವಾಲಯದಲ್ಲಿ ವಿಶೇಷವಾಗಿ ನುರಿತ ಪ್ರತ್ಯೇಕ ಸಿಬ್ಬಂದಿ ಇಲ್ಲದಿರುವುದರಿಂದ ಹಾಗೂ ಇಲಾಖಾ ಕಾರ್ಯಗಳ ಒತ್ತಡವು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಈ ಕಾರ್ಯವನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗುತ್ತಿಲ್ಲ. ಅಲ್ಲದೇ ಕಾನೂನು ಮಾಹಿತಿಯ ಕೊರತೆಯಿಂದಾಗಿ ನ್ಯಾಯಾಲಯಕ್ಕೆ ಸರಿಯಾದ ರೀತಿಯಲ್ಲಿ ಆಕ್ಷೇಪಣಾ ಹೇಳಿಕೆಗಳನ್ನು ಸಲ್ಲಿಸದ ಪ್ರಯುಕ್ತ ಅನೇಕ ಪ್ರಕರಣಗಳಲ್ಲಿ ಸರ್ಕಾರದ ವಿರುದ್ದ ತೀರ್ಪುಗಳು ಬರುತ್ತೀವೆ. ಈ ಹಿನ್ನೆಲೆಯಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ ಪ್ರಕರಣಗಳನ್ನು ಸಮರ್ಥವಾಗಿ ನಿರ್ವಹಿಸಲು ನಾಲ್ಕು ನುರಿತ ವಕೀಲರನ್ನು ನೋಡಲ್ ಅಧಿಕಾರಿಗಳಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಇದಕ್ಕೆ ರಾಜ್ಯ ಅಡ್ವಕೇಟ್ ಜನರಲ್ ರವರು ಸಹಮತಿಸಿ ಸೂಚಿಸಿರುವ ಈ ಕೆಳಕಂಡ ನಾಲ್ಕು ಜನ ವಕೀಲರನ್ನು ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಮಂಡಳಿ / ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಕಾನೂನು ನೆರವು ನೀಡಲು ನೋಡಲ್ ಅಧಿಕಾರಿಗಳನ್ನಾಗಿ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿದೆ. ಇವರುಗಳಿಗೆ ಮಾಹೆಯಾನ ರೂ.40,000/–ಗಳ (ನಲವತ್ತು ಸಾವಿರ ರೂಪಾಯಿಗಳು ಮಾತ್ರ) ಏಕೀಕೃತ ಸಂಭಾವನೆಯನ್ನು (consolidated stipend) ನಿಗಧಿಪಡಿಸಿದೆ.

| ಕ್ರ.ಸಂ | ನೋಡಲ್ ಅಧಿಕಾರಿಯ ಹೆಸರು | ನೋಡಲ್ ಅಧಿಕಾರಿಯಾಗಿ ನೇಮಿಸಿರುವ ಇಲಾಖೆ / ಮಂಡಳಿ / ಪ್ರಾಧಿಕಾರ | ಏಕೀಕೃತ ಸಂಭಾವನೆ ಪಾವತಿ |
|---|---|---|---|
| 1. | ಶ್ರೀನಾರಾಯಣಎಂ.ನಾಯ್ಕ್ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 2. | ಕು|| ಸಿಂಧು ಆಚಾರ್ಯ | ಬೆಂಗಳೂರು ಅಭಿವೃದ್ದಿ ಪ್ರಾಧಿಕಾರ | ಬೆಂಗಳೂರು ಅಭಿವೃದ್ದಿ ಪ್ರಾಧಿಕಾರ |
| 3. | ಶ್ರೀ ಡಿ.ಕೆ.ಕಿರಣ್‌ಕುಮಾರ್ | 1) ಬೆಂಗಳೂರು ಮೆಟ್ರೋ ರೈಲು ನಿಗಮ<br>2) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ |
| 4. | ಶ್ರೀ ಅಭಿಷೇಕ್ ಎಂ. ಮಾಲಿಪಾಟೀಲ್ | ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ದಿ ಪ್ರಾಧಿಕಾರ | ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ದಿ ಪ್ರಾಧಿಕಾರ |

**ಷರತ್ತು ಮತ್ತು ನಿಬಂಧನೆಗಳು:–**

1) ಮೇಲ್ಕಂಡ ಗುತ್ತಿಗೆ ಆಧಾರದ ನೇಮಕಾತಿಯು ತಾತ್ಕಾಲಿಕ ನೇಮಕಾತಿಯಾಗಿದ್ದು, ಮುಂದಿನ ಒಂದು ವರ್ಷ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ' ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

2) ಈ ನೋಡಲ್ ಅಧಿಕಾರಿಗಳಿಗೆ ನಿಗಧಿಪಡಿಸಿರುವ ಏಕೀಕೃತ ಸಂಭಾವನೆಯನ್ನು ಹೊರತುಪಡಿಸಿ ಅವರು ನಿರ್ವಹಿಸುವ ಕಾರ್ಯಗಳಿಗೆ ಇತರೇ ಯಾವುದೇ ರೀತಿಯ ವೇತನ / ಭತ್ಯೆ / ಸವಲತ್ತನ್ನು ಪಡೆಯಲು ಅರ್ಹರಿರುವುದಿಲ್ಲ.
3) ಈ ನೋಡಲ್ ಅಧಿಕಾರಿಗಳು ನಗರಾಭಿವೃದ್ಧಿ ಇಲಾಖೆಯ ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಡ್ವೋಕೇಟ್ ಜನರಲ್ ಕಛೇರಿ ಹಾಗೂ ನಗರಾಭಿವೃದ್ಧಿ ಇಲಾಖೆಯ ನಡುವೆ ನೋಡಲ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸತಕ್ಕದ್ದು.
4) ನಗರಾಭಿವೃದ್ಧಿ ಇಲಾಖೆಯ ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಹಾಜರಾಗಿ ಪ್ರಕರಣಗಳನ್ನು ಸಮರ್ಥವಾಗಿ ನಿಭಾಯಿಸುವುದು, ನಿಗಧಿತ ಅವಧಿಯೊಳಗಾಗಿ ಕಂಡಿಕೆವಾರು ಷರಾಗಳನ್ನು ತಯಾರಿಸಿ ಸಲ್ಲಿಸುವುದು, ಆಕ್ಷೇಪಣಾ ಹೇಳಿಕೆ / ಪ್ರತಿರಕ್ಷಣಾ ಹೇಳಿಕೆ ಸಲ್ಲಿಸುವುದು ಸೇರಿದಂತೆ ಎಲ್ಲಾ ರೀತಿಯ ಅಗತ್ಯ ಕಾನೂನು ನೆರವು ನೀಡತಕ್ಕದ್ದು.

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಪತ್ರ ಸಂಖ್ಯೆ: ನಅಇ 498 ಬೆಂಭೊಸ್ವಾ 2015, ದಿನಾಂಕ: 07/08/2015 ರ ಆದೇಶದಲ್ಲಿ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಕ್ಷೇತ್ರ ಇಲಾಖೆ / ಮಂಡಳಿ / ಪ್ರಾಧಿಕಾರಿಗಳಿಗೆ ಸಂಬಂಧಪಟ್ಟಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಲವು ಪ್ರಕರಣಗಳು ಬಾಕಿ ಇದ್ದು, ಸದರಿ ಪ್ರಕರಣಗಳ ಸಂಬಂಧ ಸರ್ಕಾರದ ಪರವಾಗಿ ಆಕ್ಷೇಪಣಾ ಹೇಳಿಕೆ / ಪ್ರತಿರಕ್ಷಣಾ ಹೇಳಿಕೆಗಳನ್ನು ಸಲ್ಲಿಸಲು ನೋಡಲ್ ಅಧಿಕಾರಿಗಳನ್ನು (ವಕೀಲರು) ನೇಮಿಸಲಾಗಿದ್ದು, ಸದರಿ ನೋಡಲ್ ಅಧಿಕಾರಿಗಳು ನಗರಾಭಿವೃದ್ಧಿ ಇಲಾಖೆಯ ವಿವಿಧ ಶಾಖೆಗಳಲ್ಲಿ ಏಪ್ರಿಲ್ ತಿಂಗಳಿನಲ್ಲಿಯೇ ಕರ್ತವ್ಯಕ್ಕೆ ಹಾಜರಾಗಿದ್ದು, 3 ತಿಂಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಸಂಭಾವನೆಯನ್ನು ನೀಡದಿರುವುದು ತಿಳಿದುಬಂದಿದೆ. ಆದುದರಿಂದ ಸದರಿ ನೋಡಲ್ ಅಧಿಕಾರಿಗಳಿಗೆ (ವಕೀಲರು) ದಿನಾಂಕ: 22/04/2015ರ ಆದೇಶದಂತೆ ಕೂಡಲೇ ಮಾಹೆಯಾನ ರೂ.40,000/-ಗಳ ಸಂಭಾವನೆಯನ್ನು ಪಾವತಿಸುವ ವ್ಯವಸ್ಥೆ ಮಾಡಬೇಕೆಂದು ಕೋರಲಾಗಿರುತ್ತದೆ.

ಪಾಲಿಕೆಯ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ವರದಿ ಸಂಖ್ಯೆ: ಬಿಬಿಎಂಪಿ/ಎಲ್‌ಸಿ/ಆರ್‌ಆರ್/ 1674/15-16, ದಿನಾಂಕ: 24/09/2015 ರಂತೆ ನಿಡಿರುವ ಅಭಿಪ್ರಾಯ ವರದಿಯಲ್ಲಿ ಸರ್ಕಾರದ ದಿನಾಂಕ: 22/04/2015ರ ಆದೇಶದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಕಾನೂನು ನೆರವು ನೀಡಲು ಶ್ರೀ ನಾರಾಯಣ.ಎಂ.ನಾಯ್ಕ್ ರವರನ್ನು ಸರ್ಕಾರವು ನೇಮಿಸಿಕೊಂಡಿರುತ್ತದೆ. ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರು ದಿನಾಂಕ: 07/08/2015ರಂದು ಪಾಲಿಕೆಗೆ ಪತ್ರ ಬರೆದು ವಕೀಲರಿಗೆ ಮಾಹೆಯಾನ ರೂ.40,000/-ಗಳನ್ನು ಪಾವತಿಸಲು ಕೋರಿರುತ್ತಾರೆ. ಸದರಿ ಮೊತ್ತವನ್ನು ಕಾನೂನು ಕೋಶದ ವಿಭಾಗದಿಂದ ಪಾವತಿಸುವ ಬಗ್ಗೆ ಅಪರ ಆಯುಕ್ತರು (ಆಡಳಿತ) ರವರು ಕಡತವನ್ನು ಸಲ್ಲಿಸಿರುತ್ತಾರೆ. ಕಾನೂನು ವಿಭಾಗದಲ್ಲಿ ವಕೀಲ ವೃಂದದ ವಕೀಲರಿಗೆ ಮತ್ತು ಕಾನೂನು ಅಧಿಕಾರಿ / ನೌಕರರಿಗೆ ಸಂಭಾವನೆಯನ್ನು ಪಾವತಿಸಲು ವಾರ್ಷಿಕ ಆಯವ್ಯಯ ನಿಗಧಿಪಡಿಸಲಾಗಿರುತ್ತದೆ. ಸರ್ಕಾರದ ವತಿಯಿಂದ ನೇಮಿಸಿಕೊಂಡಿರುವ ಶ್ರೀ ನಾರಾಯಣ.ಎಂ.ನಾಯ್ಕ್, ವಕೀಲರಿಗೆ ಕಾನೂನು ಇಲಾಖೆಯಿಂದ ಸಂಭಾವನೆಯನ್ನು ಪಾವತಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಕಡತವನ್ನು ಮಂಡಿಸಿ ಅನುಮೋದನೆ ಪಡೆದು ಸಲ್ಲಿಸಿದ್ದಲ್ಲಿ, ಕಾನೂನು ಇಲಾಖೆಯಿಂದ ವಕೀಲ ಸಂಭಾವನೆಯನ್ನು ಪಾವತಿಸಲು ಕ್ರಮಕೈಗೊಳ್ಳಲಾಗುವುದು ಆದ ಮೇರೆಗೆ, ಆಯುಕ್ತರ ಮುಖಾಂತರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ನಡವಳಿ ಆದೇಶ ಸಂಖ್ಯೆ:ನಅಇ 71 ಸಮನ್ವಯ 2014 ದಿನಾಂಕ: 22/04/2015ರಲ್ಲಿ ನಡವಳಿ ಆದೇಶದಲ್ಲಿ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಪಟ್ಟಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಹಲವು ಪ್ರಕರಣಗಳ ಸಂಬಂಧ ಸರ್ಕಾರದ ಪರವಾಗಿ ಆಕ್ಷೇಪಣಾ ಹೇಳಿಕೆ / ಪ್ರತಿರಕ್ಷಣಾ ಹೇಳಿಕೆಗಳನ್ನು ಸಲ್ಲಿಸಲು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿಕೊಂಡಿರುವ ಶ್ರೀ ನಾರಾಯಣ. ಎಂ.ನಾಯ್ಕ್, ವಕೀಲರು ಇವರಿಗೆ ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ರವರ ಪತ್ರ ಸಂಖ್ಯೆ: ನಅಇ 498 ಬೆಂಭೊಸ್ವಾ 2015, ದಿನಾಂಕ: 07/08/2015 ರ ಸರ್ಕಾರದ ಪತ್ರದ ವರದಿ ಹಾಗೂ ಕಾನೂನು ಕೋಶದ

ಮುಖ್ಯಸ್ಥರ ಅಭಿಪ್ರಾಯ ವರದಿ ಸಂಖ್ಯೆ: ಬಿಬಿಎಂಪಿ/ಎಲ್‌ಸಿ/ಆರ್‌ಆರ್/ 1674/15-16, ದಿನಾಂಕ: 24/09/2015 ರಲ್ಲಿನ ಅಭಿಪ್ರಾಯ ವರದಿಯನ್ವಯ ಏಪ್ರಿಲ್-2015ರ ಮಾಹೆಯಿಂದ ಪ್ರತಿ ಮಾಹೆ ರೂ.40,000/-(ನಾಲವತ್ತು ಸಾವಿರಗಳು ಮಾತ್ರ) ಗಳ ಸಂಭಾವನೆಯನ್ನು ಪಾಲಿಕೆಯ ಕಾನೂನು ವಿಭಾಗದಿಂದ ಪಾವತಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 26.10.2015ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

### *04]. ವಿಷಯದ ಸಂಖ್ಯೆ: ತೆಆಸ್ಥಾಸ/09/2015-16*

ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 06-11-2015ರ ಟಿಪ್ಪಣಿಯಲ್ಲಿರುವಂತೆ, ಆಯುಕ್ತರು ರವರ ಟಿಪ್ಪಣಿ ಸಂಖ್ಯೆ:ಕ.ಅ/ಕೇಂ.ಕ/ಪಿಆರ್/372/15-16 ದಿನಾಂಕ:10/09/2015ರ ಟಿಪ್ಪಣಿಯನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿ:17-10-2015 ರಂದು ನಡೆದ ಸಭೆಯ ನಡವಳಿಗಳ ವಿಷಯದ ಸಂಖ್ಯೆ:ಸಾ.ನ್ಯಾ.ಸ್ಥಾ.ಸ/17/2015-16ರ ಮೇರೆಗೆ ಸಾ.ನ್ಯಾ.ಸ್ಥಾ ಸಮಿತಿಯು ಭಾಗಶ: ಒಪ್ಪುತ್ತಾ ಈ ಕೆಳಕಂಡ ಮರುಹೊಂದಾಣಿಕೆ ಮಾಡಿಕೊಳ್ಳಲು ತಿರ್ಮಾನಿಸಲಾಗಿದೆ. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿ:17-10-2015 ರಂದು ನಡೆದ ಸಭೆಯ ನಡವಳಿಗಳ ವಿಷಯದ ಸಂಖ್ಯೆ:ಸಾ.ನ್ಯಾ.ಸ್ಥಾ.ಸ/17/2015-16 ರಲ್ಲಿನ ಸಾ.ನ್ಯಾ.ಸ್ಥಾ ಸಮಿತಿಯ ನಿರ್ಣಯವನ್ನು ಈ ಕೆಳಕಂಡಂತೆ ನಿರೂಪಿಸಲಾಗಿದೆ.

I) **"ಮಹಿಳಾ ಕಲ್ಯಾಣ ಕಾರ್ಯಕ್ರಮಗಳು**

ಮಹಿಳಾ ಕಲ್ಯಾಣ ಕಾರ್ಯಕ್ರಮಗಳಡಿ 9 ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಪ್ರಸಕ್ತ 2015-16ನೇ ಸಾಲಿಗೆ ರೂ.100.00 ಲಕ್ಷಗಳು ಮಾತ್ರ ಅನುದಾನ ಲಭ್ಯತೆ ಇದ್ದು, ಕನಿಷ್ಠ ಈ ಕೆಳಕಂಡ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

- ಹೊಲಿಗೆ / ನಿಟ್ಟಿಂಗ್ / ಎಂಬ್ರಾಯಿಡರಿ / ಕಾಯರ್ / ತರಬೇತಿ ಶಿಕ್ಷಕರು / ಮೇಲ್ವಿಚಾರಕರು / ದುರಸ್ತಿಗಾರರಿಗೆ ಸಿಬ್ಬಂದಿಗಳಿಗೆ ಗೌರವ ಧನ
- ಹೊಲಿಗೆ / ನಿಟ್ಟಿಂಗ್ / ಎಂಬ್ರಾಯಿಡರಿ / ಕಾಯರ್ / ಖಾಸಗಿ ಕಟ್ಟಡಗಳ ತರಬೇತಿ ಕೇಂದ್ರಗಳ ಬಾಡಿಗೆ
- ಹೊಲಿಗೆ / ನಿಟ್ಟಿಂಗ್ / ಎಂಬ್ರಾಯಿಡರಿ / ಕಾಯರ್ / ತರಬೇತಿ ಕೇಂದ್ರಗಳಲ್ಲಿ ಉಪಕರಣಗಳ ನಿರ್ವಹಣೆ ಮತ್ತು ದುರಸ್ತಿ
- ಟೈಲರಿಂಗ್ / ನಿಟ್ಟಿಂಗ್ / ಎಂಬ್ರಾಯಿಡರಿ / ಕಾಯರ್ ತರಬೇತುದಾರರಿಗೆ ಶಿಷ್ಯ ವೇತನ
- ಹೊಲಿಗೆ ತರಬೇತಿ ಕೇಂದ್ರಗಳಿಗೆ ಹೊಲಿಗೆ ಯಂತ್ರಗಳನ್ನು ಒದಗಿಸಲು ಹಾಗೂ ಹಾಲಿ ಕೇಂದ್ರಗಳಿಗೆ ಉಪಕರಣಗಳನ್ನು ಒದಗಿಸಲು

ಈ ಮೇಲ್ಕಂಡ 05 ಕಲ್ಯಾಣ ಕಾರ್ಯಕ್ರಮಗಳನ್ನು (ಇನ್ನಿತರ ಮಹಿಳಾ ಕಲ್ಯಾಣ ಕಾರ್ಯಕ್ರಮಗಳನ್ನು ಅನುದಾನದ ಕೊರತೆಯಿಂದಾಗಿ ತಾತ್ಕಾಲಿಕವಾಗಿ ಕೈಬಿಟ್ಟು) ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ರೂ.600.00 ಲಕ್ಷಗಳ ಅವಶ್ಯಕತೆ ಇದ್ದು, ಕೊರತೆ ಬೀಳುವ ರೂ.500.00 ಲಕ್ಷಗಳ ಅನುದಾನವನ್ನು ಕೆಳಕಂಡ ಲೆಕ್ಕಶೀರ್ಷಿಕೆಯಲ್ಲಿ ಮರುಹೊಂದಾಣಿಕೆ ಮಾಡಿಕೊಳ್ಳಲು ಸಮಿತಿಯು ತೀರ್ಮಾನಿಸಿತು.

- ಲೆಕ್ಕಶೀರ್ಷಿಕೆ ಪಿ2956 ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮಗಳಡಿಯಲ್ಲಿ ಮೀಸಲಿಟ್ಟ ರೂ.300.00 ಲಕ್ಷಗಳಲ್ಲಿ ರೂ.100.00 ಲಕ್ಷಗಳನ್ನು
- ಲೆಕ್ಕಶೀರ್ಷಿಕೆ ಪಿ2583 ರಾತ್ರಿ ತಂಗುದಾಣ ನಿರ್ವಹಣೆ ಕಾರ್ಯಕ್ರಮದಡಿಯಲ್ಲಿ ಮೀಸಲಿಟ್ಟ ರೂ.300.00 ಲಕ್ಷಗಳಲ್ಲಿ ರೂ.200.00 ಲಕ್ಷಗಳನ್ನು (2015-16ನೇ ಸಾಲಿನಿಂದ ಎನ್.ಯು.ಎಲ್.ಎಮ್. ಅಡಿಯಲ್ಲಿ ಸರ್ಕಾರದಿಂದ ಅವಶ್ಯ ಅನುದಾನ ಪಡೆಯುವುದು ಮತ್ತು ಹಿಂದಿನ ಬಾಕಿ ಬಿಲ್ಲುಗಳನ್ನು ಈ ಲೆಕ್ಕಶೀರ್ಷಿಕೆಯಡಿಯಲ್ಲಿ ಪಾವತಿಸತಕ್ಕದ್ದು)

- ಲೆಕ್ಕಶೀರ್ಷಿಕೆ ಪಿ3047 ಬಿಬಿಎಂಪಿ ಶಾಲೆಯಲ್ಲಿನ ಹೆಣ್ಣು ಮಕ್ಕಳಿಗೆ ಸ್ವಚ್ಛತಾ ಕಿಟ್ ವಿತರಣೆ ಕಾರ್ಯಕ್ರಮವು ಸರ್ಕಾರದ ಎನ್.ಯು.ಹೆಚ್.ಎಮ್. ಕಾರ್ಯಕ್ರಮದಲ್ಲಿ ಕೈಗೊಳ್ಳಬಹುದಾಗಿದ್ದು, ಈ ಕಾರ್ಯಕ್ರಮಕ್ಕಾಗಿ ಮೀಸಲಿಟ್ಟ ಅನುದಾನ ರೂ.200.00 ಲಕ್ಷಗಳನ್ನು

ಮೇಲ್ಕಂಡ ಮೂರು ಲೆಕ್ಕಶೀರ್ಷಿಕೆಯಡಿ ಲಭ್ಯವಾಗುವ ರೂ.500.00 ಲಕ್ಷಗಳ ಅನುದಾನವನ್ನು ಪಿ1937 ಮಹಿಳಾ ಕಲ್ಯಾಣ ಕಾರ್ಯಕ್ರಮಗಳ ಲೆಕ್ಕಶೀರ್ಷಿಕೆಗೆ ಮರುಹೊಂದಾಣಿಕೆ ಮಾಡಿಕೊಳ್ಳಲು ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯಲು ಸಾ.ನ್ಯಾ.ಸ್ಥಾ.ಸಮಿತಿಯಿಂದ ತೀರ್ಮಾನಿಸಲಾಗಿದೆ.

II) **ಲೆಕ್ಕಶೀರ್ಷಿಕೆ ಪಿ2583 ರಾತ್ರಿ ತಂಗುದಾಣ ನಿರ್ವಹಣೆ ಕಾರ್ಯಕ್ರಮದಡಿಯಲ್ಲಿ ಮೀಸಲಿಟ್ಟ ರೂ.300.00 ಲಕ್ಷಗಳಲ್ಲಿ ರೂ.200.00 ಲಕ್ಷಗಳನ್ನು (2015–16ನೇ ಸಾಲಿನಿಂದ ಎನ್.ಯು.ಎಲ್.ಎಮ್. ಅಡಿಯಲ್ಲಿ ಸರ್ಕಾರದಿಂದ ಅವಶ್ಯ ಅನುದಾನ ಪಡೆಯುವುದು ಮತ್ತು ಹಿಂದಿನ ಬಾಕಿ ಬಿಲ್ಲುಗಳನ್ನು ಈ ಲೆಕ್ಕಶೀರ್ಷಿಕೆಯಡಿಯಲ್ಲಿ ಪಾವತಿಸಲು ತೀರ್ಮಾನಿಸಲಾಗಿದ್ದು ಈ ಸಂಬಂಧ ಸರ್ಕಾರದಿಂದ ಎನ್.ಯು.ಎಲ್.ಎಮ್. ಅಡಿಯಲ್ಲಿ ಸೂಕ್ತ ಅನುದಾನ ಮಂಜೂರಾಗದಿದಲ್ಲಿ ನಗರ ವಸತಿ ರಹಿತರ ಕೇಂದಗಳ ನೀರ್ವಹಣೆಗೆ ತಗಲುವ ವೆಚ್ಚವನ್ನು ಬರಿಸಲು ಪಾಲಿಕೆಯಿಂದ ಅನುದಾನ ನೀಡಬೇಕಾಗಿರುತ್ತದೆ.**

III) 2015–16 ನೇ ಸಾಲಿನ ಆಯ್ಯವ್ಯದಲ್ಲಿನ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುದಾನ ಕೊರತೆಯಿರುವ ಹಿನ್ನೆಲೆಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ನಿಯಾಮಾನುಸಾರ ಆರ್ಹ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಲು ಈ ಕೆಳಗಿನಂತೆ ಪ್ರಸ್ತಾವನೆ ಸಲ್ಲಿಸಲಾಗಿದೆ.

1) ನಗರಾಡಳಿತ ಇಲಾಖೆ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 415 ಜಿಇಎಲ್ 2011 ದಿನಾಂಕ: 27.02.2012 ರಂತೆ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡ ವ್ಯಕ್ತಿಗತ ಮತ್ತು ಸಮೂದಾಯ ಕಾರ್ಯಕ್ರಮಗಳಿಗೆ ವಿವಿಧ ಲೆಕ್ಕಶೀರ್ಷೀಕೆಯಡಿಯಲ್ಲಿ ನಿಗದಿಪಡಿಸುವ 24.10% ಅನ್ಮದಾನದಲ್ಲಿ ಕೊರೆತೆ ಇರುವುದು ಕಂಡು ಬಂದಿರುವುದರಿಂದ ಈ ಬಗ್ಗೆ ಪರೀಶಿಲಿಸಿ ಆರ್ಹ ಹೆಚ್ಚುವರಿ ಅನುದಾನವನ್ನು ನೀಡುವ ಬಗ್ಗೆ.
2) ನಗರಾಡಳೀತ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 415 ಜಿಇಎಲ್ 2011 ದಿನಾಂಕ: 27.02.2012 ರಂತೆ ನಗರ ಸ್ಥಳಿಯ ಸಂಸ್ಥೆಗಳು ಇತರೆ ಬಡ ಜನರ ಕಲ್ಯಾಣ ನಿಧಿಯ ಆದಾಯ ಲೆಕ್ಕಾಚಾರ ಹಾಗೂ ನಧಿ ವಿನಿಯೋಗ ನಿಗದಿಪಡಿಸಬೆಕಾಗಿರುವ 7.25% ಅನುದಾನದಲ್ಲಿ ಕೊರೆತೆ ಇರುವುದು ಕಂಡು ಬಂದಿರುವುದರಿಂದ ಈ ಬಗ್ಗೆ ಪರೀಶಿಲಿಸಿ ಆರ್ಹ ಹೆಚ್ಚುವರಿ ಅನುದಾನವನ್ನು ನೀಡುವ ಬಗ್ಗೆ.
3) ನಗರಾಡಳೀತ ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 415 ಜಿಇಎಲ್ 2011 ದಿನಾಂಕ: 27.02.2012 ರಂತೆ ನಗರ ಸ್ಥಳಿಯ ಸಂಸ್ಥೆಗಳು ಅಂಗವಿಕಲರ ಕಲ್ಯಾಣ ನಿಧಿಯ ಆದಾಯ ಲೆಕ್ಕಾಚಾರ ಹಾಗೂ ನಧಿ ವಿನಿಯೋಗ ನಿಗದಿಪಡಿಸಬೆಕಾಗಿರುವ 3% ಅನುದಾನದಲ್ಲಿ ಕೊರೆತೆ ಇರುವುದು ಕಂಡು ಬಂದಿರುವುದರಿಂದ ಈ ಬಗ್ಗೆ ಪರೀಶಿಲಿಸಿ ಆರ್ಹ ಹೆಚ್ಚುವರಿ ಅನುದಾನವನ್ನು ನೀಡುವ ಬಗ್ಗೆ.

IV) (1) **"ನಗರ ಪ್ರದೇಶದಲ್ಲಿನ ಕಡು ಬಡವರಿಗೆ ಮೂಲಭೂತ ಸೌಕರ್ಯಗಳ"** ಕಾರ್ಯಕ್ರಮ ಈ ಹಿಂದಿನ ಸಾಲಿನ ಆಯವ್ಯಯ ಪುಸ್ತಕಗಳಲ್ಲಿ ಜೆ.ಎನ್.ಎನ್.ಯು.ಆರ್.ಎಂ. ಕಾಮಗಾರಿಗಳು ವಿಭಾಗ ರವರಿಗೆ ನಮೂದಿಸಲಾಗಿತ್ತು. 2015–16ನೇ ಸಾಲಿನ ಆಯವ್ಯಯ ಪುಸ್ತಕದಲ್ಲಿ ಹೊಸದಾಗಿ ಸೇರಿಸಿರುವ ಪಿ–ಕೋಡ್ 3109ರಡಿಯಲ್ಲಿ ರೂ.2000.00 ಲಕ್ಷಗಳು ಅನುಧಾನವನ್ನು ನಗರ ಪ್ರದೇಶದಲ್ಲಿನ ಕಡು ಬಡವರಿಗೆ ಮೂಲಭೂತ ಸೌಕರ್ಯಗಳ ಹೊಂದಾಣಿಕೆ ಅನುದಾನದಡಿ ಕಾರ್ಯಕ್ರಮವನ್ನು ಕಲ್ಯಾಣ ಕಾರ್ಯಕ್ರಮಗಳಡಿ ನಮೂದಿಸಿರುವದರಿಂದ ಸದರಿ ಕಾರ್ಯಕ್ರಮವನ್ನು**ಜೆ.ಎನ್.ಎನ್.ಯು.ಆರ್.ಎಂ. ನಿಯಮಾನುಸಾರ ಈ ಕಾರ್ಯಕ್ರಮಕ್ಕೆ ರೂಪುರೇಷೆಗಳನ್ನು ಮತ್ತು ಮಾರ್ಗಸೂಚಿ ಹಾಗೂ ಅನುದಾನ ಹಂಚಿಕೆ ಮತ್ತು ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಬಿಎಸ್‌ಯುಪಿ/ಕಾಮಗಾರಿ ವಿಭಾಗದವರು ಕ್ರಮವಹಿಸುವ ಬಗ್ಗೆ.**

ಅಥವಾ

(2) ಸರ್ಕಾರದಿಂದ "ನಗರ ಪ್ರದೇಶದಲ್ಲಿನ ಕಡು ಬಡವರಿಗೆ ಮೂಲಭೂತ ಸೌಕರ್ಯಗಳ" ಕಾರ್ಯಕ್ರಮಕ್ಕೆ ಹೊಂದಾಣಿಕೆ ಅನುಧಾನ ರೂ.2000.00 ಲಕ್ಷಗಳನ್ನು ರಾಜ್ಯ ಸರ್ಕಾರದಿಂದ ಅನುಧಾನದ ಮಂಜೂರಾತಿ ಕೋರಿ ಈ ಅಸುಧಾನವನ್ನು ಕೋರತೆಯಿರುವ ವಿವಿದ ಕಲ್ಯಾಣ ಕಾರ್ಯಕ್ರಮಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ.

V) ವಲಯ ಕಛೇರಿಗಳಿಂದ ವಿವಿಧ ಲಕ್ಕಶೀಷಿಕೆಯಡಿಯಲ್ಲಿ 2015-16ನೆ ಸಾಲಿನಲ್ಲಿ ಅನುಷ್ಠಾನಗೊಳಿಸಲು ಅನುಮೋದಿತ ವಿವಿಧ ಕಲ್ಯಾಣ ಕಾರ್ಯಕ್ರಮಗಳು/ಯೋಜನೆಗಳಿಗೆ ಬೌತಕ ಮತ್ತು ಆರ್ಥಿಕ ಗುರಿಗಳನ್ನು ನಿಗದಿಪಡಿಸಿ ಸಲ್ಲಿಸಲಾಗುವ ಕ್ರಿಯಾಯೋಜನೆಗೆ ಮನ್ಯ ಆಯುಕ್ತರು ಅನುಮೊದನೆ ನೀಡುವ ಬಗ್ಗೆ.

VI) ಕಲ್ಯಾಣ ಕಾರ್ಯಕ್ರಮಗಳನ್ನು ಎಲ್ಲಾ ಸಮುದಾಯದವರಿಗೆ ಯಶಸ್ವಿಯಾಗಿ ಹಮ್ಮಿಕೊಳ್ಳಲು ಆಯವ್ಯಯದಲ್ಲಿ ನಿಧಿ ಲೆಕ್ಕಾಚಾರ ಮಾರ್ಗಸೂಚಿ ಹೊರಡಿಸಿರುವ ಸರ್ಕಾರದ ಸುತ್ತೋಲೆಯಲ್ಲಿ ನಿರ್ದೇಶನ ನೀಡಿರುವ ಪ್ರಕಾರ ಆಯಾ ಸಮುದಾಯದ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಡುವ ಶೇಕಡವಾರು ಅನುದಾನವನ್ನು ಆಯಾ ಸಮುದಾಯಕ್ಕೆ ಪ್ರತ್ಯೇಕವಾಗಿ ಬ್ಯಾಂಕ್ ಖಾತೆ ತೆರೆದು ಪ್ರತಿ ತಿಂಗಳು 5ನೇ ತಾರೀಖಿನೊಳಗಾಗಿ ಮಾಹೆಯಾನ ಕ್ರೋಢೀಕರಣವಾಗುವ ಸಂಪನ್ಮೂಲ ಅನ್ವಯ ಲಭ್ಯವಾಗುವ ಅನುದಾನವನ್ನು ಆಯಾ ಖಾತೆಗೆ ಜಮಾ ಮಾಡಲು ಮಾನ್ಯ ಆಯುಕ್ತರು ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಕ್ತ ನಿರ್ದೇಶನ/ಆದೇಶ ಹೊರಡಿಸುವ ಬಗ್ಗೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಕ್ರಮ ಸಂಖ್ಯೆ (1&2)ರಲ್ಲಿನ ಮರುಹೊಂದಾಣಿಕೆ, ಕ್ರಮ ಸಂಖ್ಯೆ(3)ರಲ್ಲಿ ಕೋರಿರುವ ಹೆಚ್ಚುವರಿ ಅನುಧಾನ ಮತ್ತು ಕ್ರಮ ಸಂಖ್ಯೆ(4) ರಿಂದ (6)ವರೆಗಿನ ಪ್ರಸ್ತಾವನೆಗೆ ಅನುಮೋದನೆ ಕೋರಿ ಕಡತವನ್ನು ತೆರಿಗೆ ಆರ್ಥಿಕ ಸ್ಥಾಯಿ ಸಮಿತಿಗೆ ಮುಂದೆ ಅನುಮೊದನೆಗಾಗಿ ಸಲ್ಲಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 06-11-2015ರ ಟಿಪ್ಪಣಿಯಲ್ಲಿ ಇರುವಂತೆ, ಕ್ರಮಸಮಖ್ಯೆ-1ರ ಮಹಿಳಾ ಕಲ್ಯಾಣ ಕಾರ್ಯಕ್ರಮದ ಮರು ಹೊಂದಾಣಿಕೆಯ ಮಾರ್ಪಾಡನ್ನು ಮಾತ್ರ ಒಪ್ಪುತ್ತಾ, ಉಳಿದಂತೆ ಲೆಕ್ಕಶೀರ್ಷಿಕೆಯ ಯಾವುದೇ ಬದಲಾವಣೆಯು ಇಲ್ಲದಂತೆ ಮುಂದುವರೆಸಿಕೊಂಡು ಹೋಗಲು ಸಮಿತಿಯು ಅನುಮೋದಿಸಿತು.**

***05]. ವಿಷಯದ ಸಂಖ್ಯೆ: ತೆಆಸ್ಥಾಸ/10/2015-16***

ಆಯುಕ್ತರ ದಿನಾಂಕ: 15-10-2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ದೈನಂದಿನ ಕೆಲಸ ಕಾರ್ಯಗಳಿಗೆ ವಾಹನಗಳ ಅವಶ್ಯಕತೆ ಇದ್ದು, ಪಾಲಿಕೆಯಲ್ಲಿ ಹೆಚ್ಚಿನ ಸಂಖ್ಯೆಯ ವಾಹನಗಳು ಲಭ್ಯವಿಲ್ಲದ ಪ್ರಯುಕ್ತ, ಕೇಂದ್ರ/ಪೂರ್ವ/ಪಶ್ಚಿಮ/ದಕ್ಷಿಣ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಪ್ಯಾಕೇಜ್-1 ಟೆಂಡರ್‌ನಲ್ಲಿ ಪ್ರತಿ ತಿಂಗಳಿಗೆ 2000 ಕಿ.ಮೀ ಅಥವಾ 300 ಗಂಟೆಗಳ ಅವಧಿಗೆ ಟಾಟಾ ಇಂಡಿಕಾ ನಾನ್ ಎ.ಸಿ 185 ವಾಹನಗಳು ಮತ್ತು ಟಾಟಾ ಇಂಡಿಕಾ ಎ.ಸಿ 5 ವಾಣಿಜ್ಯ ಬಳಕೆಯ ಲಘು ವಾಹನಗಳನ್ನು ಒದಗಿಸಲು ಹಾಗೂ ಕೇಂದ್ರ/ಬೊಮ್ಮನಹಳ್ಳಿ/ ದಾಸರಹಳ್ಳಿ/ ಮಹದೇವಪುರ/ ಆರ್.ಆರ್.ನಗರ /ಯಲಹಂಕ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಪ್ಯಾಕೇಜ್-2 ಅಡಿಯಲ್ಲಿ ಪ್ರತಿ ತಿಂಗಳಿಗೆ 2500 ಕಿ.ಮೀ ಅಥವಾ 315 ಗಂಟೆಗಳ ಅವಧಿಗೆ ಟಾಟಾ ಇಂಡಿಕಾ ನಾನ್ ಎ.ಸಿ 185 ವಾಹನಗಳು ಮತ್ತು ಟಾಟಾ ಇಂಡಿಕಾ ಎ.ಸಿ 5 ವಾಣಿಜ್ಯ ಬಳಕೆಯ ಲಘು ವಾಹನಗಳನ್ನು ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದ್ದು ಸದರಿ ಟೆಂಡರ್ ಪ್ರಕಟಣೆಯನ್ನು ವಿಜಯ ಕರ್ನಾಟಕ (ಕನ್ನಡ) ಹಾಗೂ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ (ಆಂಗ್ಲ) ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿರುತ್ತದೆ ಹಾಗೂ ಟೆಂಡರ್ ಪ್ರಕಟಣೆಯನ್ನು ರಾಜ್ಯ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಜಿಲ್ಲಾ ಟೆಂಡರ್ ಬುಲೆಟಿನ್ ಅಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು (ನಗರ), ಬೆಂಗಳೂರು ರವರಿಗೆ

ಸಲ್ಲಿಸಿ ಸ್ವೀಕೃತಿ ಪಡೆಯಲಾಗಿದ್ದು ಟೆಂಡರ್ ಪ್ರಕಟಣೆ & ಟೆಂಡರ್ ಡಾಕುಮೆಂಟ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ upload ಮಾಡಲಾಗಿರುತ್ತದೆ.

ಟೆಂಡರ್ ಪ್ರಕಟಣೆಯಂತೆ ದಿನಾಂಕ: 12–11–2014 ರಂದು ತಾಂತ್ರಿಕ ಬಿಡ್‌ನ್ನು ಹಾಜರಿದ್ದ ಏಜೆನ್ಸಿಗಳ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ತೆರೆಯಲಾಗಿದ್ದು ತಾಂತ್ರಿಕ ಬಿಡ್‌ನಲ್ಲಿ ನಾಲ್ಕು ಏಜೆನ್ಸಿಗಳಾದ ಮೆ॥ ಜಾನಕಿ ಟ್ರಾವೆಲ್ಸ್ ಏಜೆನ್ಸಿ, ಶ್ರೀ ರವೀಂದ್ರ, ಮೆ॥ ಚೇತನ ಟ್ರಾವೆಲ್ಸ್ ಮತ್ತು ಮೆ॥ ಗುರು ಟೂರ್ಸ್ ಎನ್ ಟ್ರಾವೆಲ್ಸ್ ಅರ್ಹತೆಗೊಂಡಿರುತ್ತಾರೆ. ಆದರೆ, ಆರ್ಥಿಕ ಬಿಡ್‌ನ್ನು ದಿನಾಂಕ: 10–12–2014 ರಂದು ತೆರೆದು ಬಿಡ್‌ದಾರರು ನಮೂದಿಸಿರುವ ದರಗಳನ್ನು ಪರಿಶೀಲಿಸಿದಾಗ, ಬೃ.ಬೆಂ.ಮ.ಪಾಲಿಕೆಯಲ್ಲಿ ಪೂರ್ವ, ಪಶ್ಚಿಮ ದಕ್ಷಿಣ ವಲಯ ಹಾಗೂ ಕೇಂದ್ರ ಕಛೇರಿ ಇದ್ದು ಸದರಿ ವಲಯದ ಸುತ್ತಳತೆ ಸುಮಾರು 10–15 ಕಿ.ಮೀ. ಮಾತ್ರ ಇದ್ದು, ಸದರಿ ಪ್ರದೇಶಗಳ ಗುತ್ತಿಗೆ ವಾಹನಗಳಿಗೆ ಕಾರ್ಯವ್ಯಾಪ್ತಿಯನ್ನು 2000 ಕಿ.ಮೀ.ಗಳಿಗೆ ನಿಗದಿಪಡಿಸಿ ಪ್ಯಾಕೇಜ್–1 ಅಡಿಯಲ್ಲಿ ಟೆಂಡರ್ ಅಹ್ವಾನಿಸಲಾಗಿದ್ದು, ಸದರಿ ಪ್ರದೇಶ ವ್ಯಾಪ್ತಿಯಲ್ಲಿ ಗುತ್ತಿಗೆ ವಾಹನಗಳ ಕ್ರಮಿಸುವುದು ಕಡಿಮೆ ಇರುವುದರಿಂದ ಪ್ಯಾಕೇಜ್–1 ಟೆಂಡರ್‌ಗೆ ಬಿಡ್‌ದಾರರು ಪ್ರಾಮುಖ್ಯತೆ ನೀಡಿರುವುದು ಕಂಡುಬಂದಿರುತ್ತದೆ. ದಾಸರಹಳ್ಳಿ, ಯಲಹಂಕ, ಮಹದೇವಪುರ, ಆರ್.ಆರ್.ನಗರ, ಬೊಮ್ಮನಹಳ್ಳಿ ವಲಯ ಪ್ರದೇಶಗಳು ಕೇಂದ್ರ ಕಛೇರಿಯಿಂದ ಸುಮಾರು 15–20 ಕಿ.ಮೀ. ದೂರ ಇದ್ದು, semi urban ಪ್ರದೇಶಗಳಾಗಿರುತ್ತದೆ ಮತ್ತು ವಲಯ ವ್ಯಾಪ್ತಿಯು ದೊಡ್ಡದಾಗಿರುವುದರಿಂದ ಸದರಿ ಪ್ರದೇಶಗಳ ಗುತ್ತಿಗೆ ವಾಹನಗಳಿಗೆ ಕಾರ್ಯವ್ಯಾಪ್ತಿಯನ್ನು 2500ಕಿ.ಮೀ.ಗಳಿಗೆ ನಿಗದಿಪಡಿಸಿ ಪ್ಯಾಕೇಜ್–2 ಅಡಿಯಲ್ಲಿ ಟೆಂಡರ್ ಅಹ್ವಾನಿಸಲಾಗಿರುತ್ತದೆ. ಗುತ್ತಿಗೆ ವಾಹನಗಳು ಕ್ರಮಿಸಿರುವುದು ಹೆಚ್ಚಾಗಿರುವುದರಿಂದ ಹಾಗೂ ಪ್ಯಾಕೇಜ್–2 ಟೆಂಡರ್‌ನಲ್ಲಿ ಬಿಡ್‌ದಾರರು ಯಾರೂ ಭಾಗವಹಿಸದೇ ಇರುವ ಸಾಧ್ಯತೆ ಇರುವುದರಿಂದ ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಆಹ್ವಾನಿಸಲಾಗಿದ್ದ ಪ್ಯಾಕೇಜ್–1 ಟೆಂಡರ್‌ನ ಆರ್ಥಿಕ ಬಿಡ್‌ನಲ್ಲಿ ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರು ನಮೂದಿಸಿರುವ ಕನಿಷ್ಠ ಬಿಡ್‌ನ ಮಾಸಿಕ ದರ ರೂ.22,955/– (ಇಂಡಿಕಾ ನಾನ್ ಏ.ಸಿ ವಾಹನ) ಹಾಗೂ ರೂ.27,311/– (ಇಂಡಿಕಾ ಏ.ಸಿ. ವಾಹನ) ಟೆಂಡರ್ ರದ್ದುಗೊಳಿಸಲು ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪ್ಯಾಕೇಜ್–1 & ಪ್ಯಾಕೇಜ್–2 ಅಡಿಯಲ್ಲಿ ಅಲ್ಪಾವಧಿ ಮರು ಟೆಂಡರ್‌ನ್ನು (re-tender) ಒಂದೇ ಬಾರಿ ಅಹ್ವಾನಿಸುವುದು ಸೂಕ್ತವಾಗಿರುತ್ತದೆ ಎಂದು ಟೆಂಡರ್ ಮೌಲ್ಯಮಾಪನ ಸಮಿತಿ ಅಭಿಪ್ರಾಯ ಪಟ್ಟಿದ್ದರಿಂದ ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಮರು ಟೆಂಡರ್ ಅಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯು ವಿಜಯವಾಣಿ (ಕನ್ನಡ) ಹಾಗೂ ಟೈಂಸ್ ಆಫ್ ಇಂಡಿಯ (ಆಂಗ್ಲ) ದಿನಪತ್ರಿಕೆಗಳಲ್ಲಿ ದಿನಾಂಕ: 17–01–2015 ರಂದು ಪ್ರಕಟಗೊಂಡಿರುತ್ತದೆ ಹಾಗೂ ಟೆಂಡರ್ ಪ್ರಕಟಣೆಯನ್ನು ಜಿಲ್ಲಾ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟಿಸಲು ಟೆಂಡರ್ ಬುಲೆಟಿನ್ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು (ನಗರ), ಬೆಂಗಳೂರು ರವರಿಗೆ ಸಲ್ಲಿಸಿ ಸ್ವೀಕೃತಿ ಪಡೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕಟಣೆ & ಡಾಕುಮೆಂಟ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ upload ಮಾಡಲಾಗಿರುತ್ತದೆ.

ಟೆಂಡರ್ ಪ್ರಕಟಣೆಯಂತೆ, ದಿನಾಂಕ: 18–02–2015 ರಂದು ಸಂಜೆ 4:30 ಘಂಟೆಗೆ ತಾಂತ್ರಿಕ ಬಿಡ್ ತೆರೆಯಲು ಅನುವು ಮಾಡಿಕೊಳ್ಳಲಾಗಿತ್ತು. ಆದರೆ, ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರನ್ನು ಪಾಲಿಕೆಯಲ್ಲಿ ಅಹ್ವಾನಿಸಿರುವ / ಅಹ್ವಾನಿಸಲಾಗುವ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಿರುವ ಕ್ರಮ ಮತ್ತು ಸದರಿ ಟೆಂಡರ್ ಬಗ್ಗೆ ಶ್ರೀ ಮಾರೇಗೌಡ, ಮಾಲೀಕರು, ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರು ಘನ ಉಚ್ಛ ನ್ಯಾಯಾಲಯದಲ್ಲಿ ದಾವೆ WP 2709/2015 and WP 7158/2015 ಹೂಡಿದ್ದು, ಸದರಿ ವಿಷಯವು ದಿನಾಂಕ: 18–02–2015 ರಂದು ಕೋರ್ಟ್‌ಹಾಲ್ ಸಂಖ್ಯೆ–07 ಮುಂದೆ ಬಂದಾಗ ಘನ ನ್ಯಾಯಾಧೀಶರು ಮುಂದಿನ ಆದೇಶ ನೀಡುವರೆಗೂ ತಾಂತ್ರಿಕ ಬಿಡ್ ತೆರೆಯಬಾರದೆಂದು ಮೌಖಿಕವಾಗಿ ನಿರ್ದೇಶನ ನೀಡಿರುವ ಮೇರೆಗೆ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿರುತ್ತದೆ. ಮುಂದುವರೆದಂತೆ, ಸದರಿ ದಾವೆ WP 2709/2015 and WP 7158/2015 ವಿಷಯವು ದಿನಾಂಕ: 10–03–2015 ರಂದು ಕೋರ್ಟ್‌ಹಾಲ್ ಸಂಖ್ಯೆ–13ರ ಮುಂದೆ ಬಂದಾಗ ಘನ ನ್ಯಾಯಾಧೀಶರು ತಾಂತ್ರಿಕ ಬಿಡ್ ತೆರೆದು ಮುಂದಿನ ಕ್ರಮ ಜರುಗಿಸಲು ಮೌಖಿಕವಾಗಿ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ, ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 10–03–2015 ರಂದು ತೆರೆಯಲಾಗಿದ್ದು ಪ್ಯಾಕೇಜ್–1 ಟೆಂಡರ್‌ನಲ್ಲಿ ಮೆ॥ ಚೇತನ ಟ್ರಾವಲ್ಸ್ ಮತ್ತು

ಶ್ರೀ ರವೀಂದ್ರ ರವರು ಮತ್ತು ಪ್ಯಾಕೇಜ್–2 ಟೆಂಡರ್‌ನಲ್ಲಿ ಮೆ॥ ಚೇತನ ಟ್ರಾವಲ್ಸ್ ಮತ್ತು ಶ್ರೀ ರವೀಂದ್ರ ರವರು ಭಾಗವಹಿಸಿರುತ್ತಾರೆ.

ಮುಂದುವರೆದಂತೆ, ದಾವೆ WP 2709/2015 and WP 7158/2015 ವಿಷಯವು ಇತ್ಯರ್ಥವಾಗಿ ತೀರ್ಪಿನಲ್ಲಿನ ಅಂಶಗಳನ್ನು ಪರಿಶೀಲಿಸಿ, ಕೈಗೊಳ್ಳಬೇಕಾಗಿರುವ ಮುಂದಿನ ಕ್ರಮದ ಬಗ್ಗೆ ಕಾನೂನು ಅಭಿಪ್ರಾಯ ನೀಡಲು ಕಾನೂನು ಸಲಹೆಗಾರರನ್ನು ಕೋರಲಾಗಿ ಸದರಿಯವರು ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ.

1. ದಿನಾಂಕ: 09–10–2014 ಟೆಂಡರ್‌ನಲ್ಲಿ ಕಡಿಮೆ ಬಿಡ್‌ದಾರರಾದ ಮೆ॥ ಜಾನಕಿ ಟ್ರಾವೆಲ್ಸ್‌ರವರಿಗೆ ಕಾರ್ಯಾದೇಶ ನೀಡಬೇಕಾಗಿರುತ್ತದೆ. ಆದರೆ,
2. ದಿನಾಂಕ: 09–10–2014 ಟೆಂಡರ್ ಪ್ರಕ್ರಿಯೆಯನ್ನು ಕೆ.ಟಿ.ಪಿ.ಪಿ ಕಾಯ್ದೆ ಕಾಲಂ 14 ರಂತೆ ರದ್ದುಗೊಳಿಸದ ಹೊರತು, ಕಾನೂನಾತ್ಮಕ ಆಧಾರಗಳಿದ್ದರೂ ಸಹ ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರನ್ನು ಕಪ್ಪುಪಟ್ಟಿಗೆ ಸೇರಿಸಲು ಬರುವುದಿಲ್ಲವಾಗಿರುತ್ತದೆ.
3. ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರು ವಿಫಲರಾಗಿದ್ದಲ್ಲಿ ಮಾತ್ರ ನಿಯಮವಳಿಗಳಂತೆ ಅವಕಾಶ ಕಲ್ಪಿಸಿ ಅವರ ಮನವಿಯನ್ನು ಪರಿಗಣಿಸಿ, ಸಮಂಜಸವಾಗದೇ ಇದ್ದಲ್ಲಿ ಮಾತ್ರ ಕಪ್ಪುಪಟ್ಟಿಗೆ ಸೇರಿಸಲು ತೀರ್ಮಾನ ತೆಗೆದುಕೊಂಡು ಸದರಿಯವರಿಗೆ ತಿಳಿಸಬೇಕಾಗಿರುತ್ತದೆ.
4. ಪ್ಯಾಕೇಜ್–2ಕ್ಕೆ ಯಾವುದೇ ಅಡಚಣೆ ಇಲ್ಲದೇ ಇರುವುದರಿಂದ ಹೊಸದಾಗಿ ಟೆಂಡರ್ ಪ್ರಕ್ರಿಯೆ ನಡೆಸಬಹುದಾಗಿರುತ್ತದೆ.

ಅದರಂತೆ, ದಿನಾಂಕ: 18–05–2015 ರಂದು ಸದರಿ ದಾವೆಗಳ ತೀರ್ಪಿನ ಟೆಂಡರ್ ಮೌಲ್ಯಮಾಪನ ಸಮಿತಿಯಿಂದ ಅನುಮೋದನೆ ಪಡೆದು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆಗೊಂಡ ಬಿಡ್‌ದಾರರಿಗೆ ಆರ್ಥಿಕ ಬಿಡ್ ತೆರೆಯಲಾಗಿದ್ದು ಬಿಡ್ ದರಗಳನ್ನು ಕೆಳಕಂಡಂತೆ ಸಲ್ಲಿಸಿರುತ್ತಾರೆ.

***PACKAGE-1***

| *Sl. No* | *Agency Name* | *Type of vehicle* | *Tender Rate/month/ per vehicle (in Rs.)* | *No of vehicles* | *Amount (in Rs.) per month* | *Remarks* |
|---|---|---|---|---|---|---|
| *1* | *M/S Janaki Travel Agency* | *Tata Indica Non AC* | *22,955* | *185* | *42,46,675* | *L1* |
| | | *Tata Indica AC* | *27,311* | *5* | *1,36,555* | |
| | | *Total* | | *190* | *43,83,230* | |
| *2* | *Sri Ravindra* | *Tata Indica Non AC* | *24,820* | *185* | *45,91,700* | *L2* |
| | | *Tata Indica AC* | *26,810* | *5* | *1,34,050* | |
| | | *Total* | | *190* | *47,25,750* | |
| *3* | *M/S Chetana Travels* | *Tata Indica Non AC* | *24,849* | *185* | *45,97,065* | *L3* |
| | | *Tata Indica AC* | *26,838* | *5* | *1,34,190* | |
| | | *Total* | | *190* | *47,31,255* | |
| *4* | *M/S Guru Tours & Travels* | *Tata Indica Non AC* | *24,939* | *185* | *46,13,715* | *L4* |
| | | *Tata Indica AC* | *27,495* | *5* | *1,37,475* | |
| | | *Total* | | *190* | *47,51,190* | |

***PACKAGE-2***

| *Sl. No* | *Agency Name* | *Type of vehicle* | *Tender Rate/month/ per vehicle (in Rs.)* | *No of vehicles* | *Amount (in Rs.) per month* | *Remarks* |
|---|---|---|---|---|---|---|
| ***-No Bidders-*** | | | | | | |

ಪ್ಯಾಕೇಜ್–1 ಅಡಿಯಲ್ಲಿನ ಟೆಂಡರ್‌ನ ಆರ್ಥಿಕ ಬಿಡ್‌ನಲ್ಲಿ ಮೆ॥ ಜಾನಕಿ ಟ್ರಾವಲ್ಸ್ ರವರು ನಮೂದಿಸಿರುವ ಒಟ್ಟು 190 ವಾಹನಗಳಿಗೆ ಪ್ರತಿ ತಿಂಗಳಿಗೆ ಅಂದಾಜು ಮೊತ್ತ ರೂ. 43,83,230/– ಮತ್ತು ಒಂದು ವರ್ಷದ ಅವಧಿಗೆ ಒಟ್ಟು ವೆಚ್ಚ ರೂ.5,25,98,760/–ಗಳಾಗಿರುತ್ತದೆ. ಆದರೆ, ಪ್ರಸ್ತುತ ಪಾಲಿಕೆ ಅಧಿಕಾರಿಗಳಿಗೆ 180

ವಾಹನಗಳು ಬೇಕಾಗಿದ್ದು, ಪ್ರತಿ ತಿಂಗಳಿಗೆ ಅಂದಾಜು ಮೊತ್ತ ರೂ. 41,36,256/– ಮತ್ತು ಒಂದು ವರ್ಷದ ಅವಧಿಗೆ ಒಟ್ಟು ವೆಚ್ಚ ರೂ.4,96,35,072/–ಗಳಾಗಿರುತ್ತದೆ. ವಿವರಗಳು ಕೆಳಕಂಡಂತೆ ಇರುತ್ತದೆ:

***PACKAGE-1***

| *Sl. No* | *Agency Name* | *Type of vehicles* | *Tender Rate/month/ per vehicle (in Rs.)* | *No of vehicles* | *Amount (in Rs.)* | *Remarks* |
|---|---|---|---|---|---|---|
| 1 | M/S Janaki Travel Agency | Tata Indica Non AC | 22,955 | 179 | 41,08,945 | L1 |
| | | Tata Indica AC | 27,311 | 1 | 27,311 | |
| | | **Total** | | **180** | **41,36,256** | |

ಹಾಗೂ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅರ್ಹ ಅಧಿಕಾರಿಗಳಿಗೆ ಗುತ್ತಿಗೆ ವಾಹನ ಸೌಲಭ್ಯವನ್ನು ಇನ್ನು ಮುಂದೆ ಕಲ್ಪಿಸಲು ಅನುವು ಮಾಡಿಕೊಳ್ಳಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಗಣಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸಲು ಇ–ಪ್ರೊಕೊರ್‌ಮೆಂಟ್ ಪ್ಯಾಕೇಜ್–1 ಅಡಿಯಲ್ಲಿನ ಟೆಂಡರ್‌ನ ಆರ್ಥಿಕ ಬಿಡ್‌ನಲ್ಲಿ ಮೆ॥ ಜಾನಕಿ ಟ್ರಾವಲ್ಸ್ ರವರಿಗೆ ಒಟ್ಟು 180 ವಾಹನಗಳಿಗೆ ಪ್ರತಿ ತಿಂಗಳಿಗೆ ಅಂದಾಜು ಮೊತ್ತ ರೂ. 41,36,256/– ಮತ್ತು ಒಂದು ವರ್ಷದ ಅವಧಿಗೆ ಒಟ್ಟು ವೆಚ್ಚ ರೂ. 4,96,35,072/–ಗಳಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಹಾಗೂ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅರ್ಹ ಅಧಿಕಾರಿಗಳಿಗೆ ಗುತ್ತಿಗೆ ವಾಹನ ಸೌಲಭ್ಯವನ್ನು ಇನ್ನು ಮುಂದೆ ಕಲ್ಪಿಸಲು ಅನುವು ಮಾಡಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅವಗಾಹನೆಗೆ ತರುತ್ತಾ ಟೆಂಡರ್ & ಆಡಳಿತಾತ್ಮಕ ಅನುಮೋದನೆ ಕೋರಿ ಮಂಡಿಸಿದೆ.

**–:ಮುಂದೂಡಿದೆ:–**

## ***ಹೆಚ್ಚುವರಿ ವಿಷಯಗಳು:–***

### ***01]. ವಿಷಯದ ಸಂಖ್ಯೆ: ತೆಆಸ್ಥಾಸ/13/2015–16***

ಆಯುಕ್ತರ ದಿನಾಂಕ: 23–11–2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಅನಾರೋಗ್ಯಕ್ಕೆ ಒಳಗಾಗುವ ಆರ್ಥಿಕವಾಗಿ ಹಿಂದುಳಿದ ಮತ್ತು ಬಡ ಕುಟುಂಬದ ನಾಗರೀಕರಿಗೆ ಪೂಜ್ಯ ಮಹಾಪೌರರ ವೈದ್ಯಕೀಯ ಪರಿಹಾರ ನಿಧಿಯಿಂದ ಆರ್ಥಿಕವಾಗಿ ಧನ ಸಹಾಯ ಮಾಡುವ ದೃಷ್ಟಿಯಿಂದ 2015–16ನೇ ಸಾಲಿನ ಆಯವ್ಯಯದಲ್ಲಿ ಪಿ–0188 ರಲ್ಲಿ ಕೇವಲ 10.00 ಲಕ್ಷಗಳ ಅನುದಾನ ಮಾತ್ರ ಲಭ್ಯವಿದ್ದು, ಅದು ಪೂರ್ಣವಾಗಿ ಖರ್ಚಾಗಿರುವ ಹಿನ್ನೆಲೆಯಲ್ಲಿ ಪೂಜ್ಯ ಮಹಪೌರರ ಟಿಪ್ಪಣಿ ದಿನಾಂಕ:21–09–2015 ಹಾಗೂ ಸಾರಿಗೆ ಸಚಿವರು ಹಾಗೂ ಮಾಜಿ ಜಿಲ್ಲಾ ಉಸ್ತುವಾರಿ ಸಚಿವರ ಟಿಪ್ಪಣಿ ದಿನಾಂಕ:26–10–2015ರಂತೆ ಪಿ–3075 ಲೆಕ್ಕಶೀರ್ಷಿಕೆಯಡಿಯಲ್ಲಿ ಮೀಸಲಿಟ್ಟಿರುವ ರೂ.20.00 ಕೋಟಿಗಳ ಮೊತ್ತದಲ್ಲಿ ಬೆಂಗಳೂರು ನಗರದ ಸಾರ್ವಜನಿಕರ ಹಿತದೃಷ್ಟಿಯಿಂದ ಪೂಜ್ಯ ಮಹಾಪೌರರ ವೈದ್ಯಕೀಯ ಪರಿಹಾರ ನಿಧಿಗೆ ಪಿ–0188 ಗೆ ರೂ.5.00 ಕೋಟಿ ಮೊತ್ತವನ್ನು ವರ್ಗಾಯಿಸುವ ಕುರಿತು ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿಯ ಮಂಜೂರಾತಿ ಹಾಗೂ ಈ ಹಿಂದೆ 2014–15ನೇ ಸಾಲಿನಲ್ಲಿ ವೈದ್ಯಕೀಯ ಪರಿಹಾರಕ್ಕೆ ಸಂಬಂಧಿಸಿದಂತೆ ರೂ.63,07,881/–ಗಳ ಚೆಕ್‌ಗಳನ್ನು 2015–16ನೇ ಸಾಲಿನಲ್ಲಿ ಮಾನ್ಯ ಆಡಳಿತಾಧಿಕಾರಿಗಳ ಆದೇಶದಂತೆ 2014–15ನೇ ಸಾಲಿಗೆ ಸಂಬಂಧಿಸಿದುದಾಗಿದ್ದು, ರೂ.63,07,881/–ಗಳನ್ನು ಪೂಜ್ಯ ಮಹಾಪೌರರಿಂದ ಈ ಹಿಂದೆ ಅನುಮೋದನೆಯಾದ ಕಾರಣ ಪಿ ಕೋಡ್–0190 ಯಿಂದ ಪುನರ್ ವಿನಿಯೋಗ ಮಾಡಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 23.11.2015ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *02]. ವಿಷಯದ ಸಂಖ್ಯೆ: ತೆಆಸ್ಥಾಸ/14/2015-16*

ಆಯುಕ್ತರ ದಿನಾಂಕ: 23-11-2015ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2015-16ನೇ ಸಾಲಿನ ಆಯವ್ಯಯದಲ್ಲಿ ಪಾಲಿಕೆಯ ಎಲ್ಲಾ ವಾರ್ಡ್‌ಗಳಿಗೆ ಪ್ರತಿ ವಾರ್ಡ್‌ಗೆ ರೂ.10.00 ಲಕ್ಷದಂತೆ ಲೆಕ್ಕ ಶೀರ್ಷಿಕೆ ಪಿ.1771 ರಲ್ಲಿ ವಾರ್ಡ್ ಅನುದಾನ ಒಟ್ಟಾರೆ ರೂ.20.00 ಕೋಟಿ ಮತ್ತು ಲೆಕ್ಕ ಶೀರ್ಷಿಕೆ ಪಿ.1802 ರ ಕುಡಿಯುವ ನೀರು ಅನುದಾನ ಪ್ರತಿ ವಾರ್ಡ್‌ಗೆ ರೂ.10.00 ಲಕ್ಷದಂತೆ ಒಟ್ಟಾರೆ ರೂ.20.00 ಕೋಟಿಗಳನ್ನು ಮೀಸಲಿರಿಸಿದೆ.

